ಫೇಸ್‌ಬುಕ್ ಪೂರ್ವದಲ್ಲಿ ಕೂಪಮಂಡೂಕದಂತೆ ಸೀಮಿತ ಜಗತ್ತಿನಲ್ಲಿದ್ದ ನಮಗೆ ನಂತರದ ದಿನಗಳಲ್ಲಿ ಜಾಗತಿಕ ಸಮುದ್ರಕ್ಕೇ ಜಿಗಿದಂತಾಗಿದೆ.



■ ರೇಣುಕಾ ಮಂಜುನಾಥ್
ಹವ್ಯಾಸಿ ಲೇಖಕಿ




# ಫೇಸ್‌ಬುಕ್ ಎಂಬ ಅಪ್ರತಿಮ 'ಭಾವಪೀಠ'

'ನಿನಗೆ ಒಂಟಿತನ ಕಾಡಿದರೆ ಈ ಇಡೀ ಜಗತ್ತನ್ನೇ ನಿನ್ನದೆಂದು ಭಾವಿಸು. ಅದು ನಿನ್ನನ್ನು ಅಪ್ಪಿಕೊಳ್ಳುತ್ತದೆ.'

ಈ ಶತಮಾನದ, ನನ್ನ ನೆಚ್ಚಿನ, ಜನಪ್ರಿಯ, ಪ್ರಭಾವಿ ಮಹಿಳೆ ಓಪ್ರಾ ವಿನ್‌ಫ್ರೆ ಹೇಳುವ ಮಾತಿದು.

ಈ ಮಾತು ಎಷ್ಟು ನಿಜ ಎಂದು ಅನುಭವಿಸಬೇಕಾದರೆ ಫೇಸ್‌ಬುಕ್‌ನೊಂದಿಗೆ ಒಡನಾಡಬೇಕು. ಮೊಬೈಲ್ ರೂಪದಲ್ಲಿ ಅಂಗೈಗೆ ಬಂದೊದಗಿದ ಈ ಅಪ್ರತಿಮ 'ಭಾವಪೀಠ', ಅಭಿವ್ಯಕ್ತಿಗೆ ದಕ್ಕಿದ ಅಪೂರ್ವ ಕೊಡುಗೆ ಈ ಫೇಸ್‌ಬುಕ್.

ನಮ್ಮ ತಲೆಮಾರು ಕಂಡ ಸಾಮಾಜಿಕ ಸ್ಥಿತ್ಯಂತರಗಳಲ್ಲಿ 'ಒಂಟಿತನ'ವೆಂಬುದು ನಾವೇ ತಂದಿಟ್ಟುಕೊಂಡ ಪಿಡುಗು. ಈ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣವೆಂಬುದು ಜನಬಳಕೆಯಾಗಿ ನಮಗೆ ಅನಿರೀಕ್ಷಿತವಾಗಿ ಒದಗಿಬಂದ ಮಾಯಾಲೋಕ.

ನಮ್ಮ ಮನೋಭೂಮಿಕೆಯನ್ನು ಚಟುವಟಿಕೆಯಿಂದಿಡುವ, ಬದುಕಿನಲ್ಲಿ ಲವಲವಿಕೆ ಮೂಡಿಸುವ, ಅನನ್ಯ ಅದ್ಭುತ ವೇದಿಕೆ. ಫೇಸ್‌ಬುಕ್ ಪಟ್ಟಿ ಮಾಡಿರುವ ಮನುಷ್ಯನ 123 ಭಾವಗಳನ್ನು (feeling emojis) ಸಕ್ರಿಯವಾಗಿಟ್ಟು, ಚುರುಕುಗೊಳಿಸಿಕೊಳ್ಳಲು ಈ ಭಾವಪೀಠವೊಂದು ಜೀವನ್ಮುಖಿ ಶಕ್ತಿಕೇಂದ್ರ. ಅದು ನಮ್ಮನಮ್ಮ ಭಾವಕ್ಕೆ, ಅಭಿರುಚಿಗೆ, ಸಾಮರ್ಥ್ಯಕ್ಕೆ ತಕ್ಕಂತೆ ಬಳಸಿಕೊಳ್ಳಬಹುದಾದ, ನಮ್ಮ ವಿಸ್ತಾರಕ್ಕೆ ತಕ್ಕಂತೆ ತೆರೆದುಕೊಳ್ಳುವ, ನಮ್ಮ ಮನೋಬೇಡಿಕೆಗಳಿಗೆ ಪೂರಕವಾಗಿರುವ ಬಹುಮುಖಿ ವೇದಿಕೆ. ಇಷ್ಟೆಲ್ಲಾ ಇದರ ಬಗ್ಗೆ ಹಾಡಿಹೊಗಳಬೇಕೆನಿಸಿದ್ದೇಕೆಂದರೆ, ನಮ್ಮ ಬದುಕನ್ನು ಫೇಸ್‌ಬುಕ್ ಪೂರ್ವ ಮತ್ತು ಫೇಸ್‌ಬುಕ್ಕೋತ್ತರವೆಂದು ಎರಡು ಭಾಗವಾಗಿ ಗಮನಿಸಿಕೊಳ್ಳಬಹುದಾದಷ್ಟು ನನ್ನ ಬದುಕಿನಲ್ಲಿ ಬದಲಾವಣೆ ತಂದಿದೆ.

ಸರಳವಾಗಿ ಹೇಳಬೇಕೆಂದರೆ, ಮುಂಚಿನ ದಿನಗಳಲ್ಲಿ ನನ್ನ ವ್ಯಾಪ್ತಿ , ಒಡನಾಟ, ನಾನು ಬೆಳೆಯುವ ಸಾಧ್ಯತೆ ಹೇಗಿತ್ತು? ಎಂದೆಲ್ಲಾ ಯೋಚಿಸಿದಾಗ, ನನ್ನ ಶಿಕ್ಷಣ, ಹುಟ್ಟಿದ ಮನೆ, ಬೆಳೆದ ಊರು, ಜೊತೆಯವರು, ಕೆಲಸ ಮಾಡಿದ ಸಂಸ್ಥೆ, ನನ್ನ ಅಭಿರುಚಿ, ಸೇರಿದ ಮನೆ ಮತ್ತು ಸುತ್ತಮುತ್ತಲಿನ ವಿದ್ಯಮಾನಗಳು ಇವೆಲ್ಲದರ ಆಧಾರದ ಮೇಲೆ ನನ್ನ ಬದುಕಿನ ವ್ಯಾಪ್ತಿ ಇರುತ್ತಿತ್ತು. ಅಲ್ಲಿ ಎಂತೆಂತಹಾ ವ್ಯಕ್ತಿಗಳ ಸಂಪರ್ಕಕ್ಕೆ ಬರುತ್ತೇವೆ ಮತ್ತು ಅವರೊಡನೆ ನಾವೆಷ್ಟು ಆತ್ಮೀಯವಾಗಿ ಹತ್ತಿರದವರಾಗಿ ಇರಲು ಸಾಧ್ಯ ಎಂಬುದೆಲ್ಲಾ ಗಣನೆಗೆ ತಂದುಕೊಳ್ಳಬೇಕಾದ ವಿಷಯ. ಈ ನಿಟ್ಟಿನಲ್ಲಿ ನಮ್ಮ ಸುತ್ತ ನಮಗೆ ಲಭ್ಯವಾದವರೇ ನಮ್ಮ ಬದುಕಿನ ದಿಕ್ಕನ್ನು ನಿರ್ಧರಿಸುತ್ತಿರುವಂತಿತ್ತು. ನಾವು ಬೆಳೆಯಲಾಗುತ್ತಿದ್ದುದು ಇಷ್ಟೇ ಸೀಮಿತ ಪ್ರಪಂಚದಲ್ಲಿ.

'ಎಕ್ಸ್‌ಪೋಶರ್' ಎಂಬುದು ಪ್ರತಿವ್ಯಕ್ತಿಯ ಅಭಿವೃದ್ಧಿಗೆ ಬಹುಮುಖ್ಯ ವಿಷಯ. ಫೇಸ್‌ಬುಕ್ ಇದನ್ನು ನಮ್ಮ ಬೆರಳತುದಿಗೆ ತಂದೊದಗಿಸಿದೆ.

ಹೆಚ್ಚು ಜನರ ಒಡನಾಟದಿಂದಾಗಿ ಫೇಸ್‌ಬುಕ್ಕೋತ್ತರ ಅವಧಿ ನನಗೆ ಬದುಕನ್ನು ಹೆಚ್ಚು ಹಸನಾಗಿಸಿ, ಅರ್ಥಪೂರ್ಣವಾಗಿಸಿದೆ ಎಂದರೆ ಅತಿಶಯೋಕ್ತಿಯಲ್ಲ. ನನ್ನ ಸಮಾನ ಅಭಿರುಚಿಯ, ನನ್ನ ಭಾವನೆಗಳನ್ನು ಆದರಿಸಿ ಗೌರವಿಸುವ, ತಿಳಿಹೇಳುವ, ಸಮಾಧಾನಿಸುವ, ಅದೆಷ್ಟು ಸ್ನೇಹಿತರು ನನಗೆ ಸಿಕ್ಕಿದ್ದಾರೆ!

ಇದೆಲ್ಲಾ ಒಂದು ಕಡೆಯಾದರೆ, ನಮ್ಮ ಚಿಂತನೆಗಳಿಗೆ, ಪ್ರತಿಭೆಗಳಿಗೆ, ಹವ್ಯಾಸಕ್ಕೆ, ಆಸಕ್ತಿಗೆ, ಕುತೂಹಲಕ್ಕೆ, ಮನರಂಜನೆಗೆ, ಕಷ್ಟಕ್ಕೆ, ಮಾಹಿತಿಗೆ, ಸಹಾಯಕ್ಕೆ, ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿಯಲು, ಸ್ಪಂದಿಸಲು, ಅಡುಗೆಗೆ, ಆರೋಗ್ಯಕ್ಕೆ, ಪ್ರವಾಸಕ್ಕೆ, ಸಲಹೆಗೆ, ಸೇವೆಗೆ, ಆಧ್ಯಾತ್ಮಿಕ ಚಿಂತನೆಗೆ ಎಲ್ಲದಕ್ಕೂ ಫೇಸ್‌ಬುಕ್ ನಮಗೆ ಬೇಕಾದ್ದನ್ನು ಒದಗಿಸಲು ಬೆರಳತುದಿಯಲ್ಲಿ ಸನ್ನದ್ಧ.

ಫೇಸ್‌ಬುಕ್ ಪೂರ್ವದಲ್ಲಿ ಕೂಪಮಂಡೂಕದಂತೆ ಸೀಮಿತ ಜಗತ್ತಿನಲ್ಲಿದ್ದ ನಮಗೆ ನಂತರದ ದಿನಗಳಲ್ಲಿ ಜಾಗತಿಕ ಸಮುದ್ರಕ್ಕೇ ಜಿಗಿದಂತಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ಪ್ರಪಂಚದಾದ್ಯಂತ ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲಿ, ಪ್ರತಿಯೊಬ್ಬರೂ ಸಹ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಯ್ದುಕೊಂಡು ಆಗಿಂದಾಗ್ಗೆ ಅಭಿಪ್ರಾಯಿಸಲು ಅವರಿಗೆ ಒದಗಿಸಲಾಗಿರುವ 'ಅವರದ್ದೇ ಗೋಡೆ' ನಿಜಕ್ಕೂ ಅಪೂರ್ವವಾದದ್ದು ಮತ್ತು ಅಷ್ಟೇ ಪ್ರಭಾವಿಯಾದದ್ದು. ಯಾರನ್ನೂ ಅವಲಂಬಿಸದೆ ನಮ್ಮ ಅಹವಾಲುಗಳನ್ನು, ತಕರಾರನ್ನು, ದೂರುಗಳನ್ನು, ಮೆಚ್ಚುಗೆಗಳನ್ನು, ಘಟನೆಗಳನ್ನು ಸಮಷ್ಟಿಪ್ರಜ್ಞೆಯೊಂದಿಗೆ ಜಗತ್ತಿನ ಮುಂದೆ ಈ 'ಗೋಡೆ'ಯ ಮೂಲಕ ನಮ್ಮನ್ನು ಪ್ರತಿಪಾದಿಸಿಕೊಳ್ಳುವ ಅವಕಾಶ ಹಿಂದೆಂದೂ ಇರಲಿಲ್ಲ. ಈಗಿನ ಸಾಮಾಜಿಕ ಜಾಲತಾಣದ ಬಹು ದೊಡ್ಡ ಶಕ್ತಿಯಿದು. ಸರ್ವಾಧಿಕಾರಿಗಳ, ಭ್ರಷ್ಟರ ವಿರುದ್ಧ ದನಿಯೆತ್ತಲು ಮೊಬೈಲ್ ರೂಪದಲ್ಲಿ ಅಂಗೈನಲ್ಲೇ ಘಟಿಸಿದ ಜಾಗತಿಕ ಕ್ರಾಂತಿಯಿದು. ■